

ಬಂದೀನಿ' ಎಂದು ಗುನುಗುತ್ತ ಸಂಗಮದ ಹಾದಿ ಹಿಡಿದೆವು. ಅಲ್ಲಿ ಗಂಗಾ ನದಿಗೆ ತಾತ್ಕಾಲಿಕ ಬ್ರಿಡ್ಜ್‌ಗಳನ್ನು ನಿರ್ಮಿಸಲಾಗಿತ್ತು. ದೋಣಿಗಳಿಗಾಗಿ ಕಾಯುತ್ತಾ ಕುಳಿತುಕೊಳ್ಳಲು ವ್ಯವಸ್ಥೆಯಿತ್ತು. ಅಲ್ಲಿಗೆ ಬಂದ ದೋಣಿಯನ್ನು ಬುಕ್ ಮಾಡಿಕೊಂಡು ಸಂಗಮದ ಕಡೆಗೆ ಹೊರಟೆವು.

ಎಂತಹ ವಿಶಾಲವಾದ ನದಿಯ ಹರವು! ಒಂದು ದಡದಿಂದ ಮತ್ತೊಂದು ದಡಕ್ಕೆ ಕಾಣದಷ್ಟು ದೊಡ್ಡದಾದ ಗಂಗೆ ಶಾಂತವಾಗಿ ಹರಿಯುತ್ತಿದ್ದಾಳೆ. ನದಿಯಲ್ಲಿ ತೇಲುತ್ತಿದ್ದ ನೀರ್ಕೋಳಿಗಳು, ಮೀನು ಹಿಡಿಯಲು ಹೊಂಚು ಹಾಕುತ್ತಿದ್ದ ಪಕ್ಷಿ ಸಮೂಹ, ಕಣ್ಣು ಹಾಯಿಸಿದಷ್ಟೂ ದೂರ ನೀರು. ಅವ್ಯಕ್ತವಾದ ಆನಂದ ಮೈಮನ ತುಂಬಿಕೊಳ್ಳುತ್ತಿತ್ತು. ನಮ್ಮ ಆನಂದವನ್ನು ಹೆಚ್ಚಿಸುತ್ತಿದ್ದ ಕುಳಿರ್ಗಾಳಿ.

ಸಂಗಮಕ್ಕೆ ಬಂದೆವು. ಅಲ್ಲೂ ತಾತ್ಕಾಲಿಕವಾದ ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ. ಅಲ್ಲಿಗೆ ತಲುಪಿಸಿದ ದೋಣಿಯವರು ನಮಗೆ ಅರ್ಧ ಗಂಟೆ ಅಲ್ಲಿರಲು ಅವಕಾಶ ಕೊಟ್ಟರು.

ಸಂಗಮದಲ್ಲಿ ಇಳಿದಾಗ ಕೊರೆಯುವ ನೀರಲ್ಲಿ ಒಂದು ಮುಳುಗು ಹಾಕುವವರೆಗೂ ಗದಗದಿಸುತ್ತಲೇ ಇದ್ದೆವು, ಎರಡು ಮೂರು ಮುಳುಗೇಳುತ್ತಲೇ ಉತ್ಸಾಹ, ಮತ್ತೆ ಮತ್ತೆ ಮುಳುಗೇಳುವ ಖುಷಿ. ಸೂರ್ಯನಿಗೆ ಅರ್ಘ್ಯ ನೀಡಿದಾಗ ಜನ್ಮ ಸಾರ್ಥಕವಾಯಿತು ಎಂಬ ಮನೋಭಾವ. ಎಂತಹುದೋ ನಿರಾಳತೆ.

ಗುಪ್ತಗಾಮಿನಿಯಾಗಿ ಹರಿಯುವ ಸರಸ್ವತಿಯ ವೇಗದ ಚಲನೆಯು ನಮಗೆ ಮಿಂದೇಳುವಾಗ ಅನುಭವವಾದಂತಾಯ್ತು. ಅಂತೂ ತ್ರಿವೇಣಿಯರಿಗೆ ಕೈಮುಗಿದು ಮೈಮನಸ್ಸುಗಳನ್ನು ಹಗುರಾಗಿಸಿಕೊಂಡು ಬಂದೆವು. ನಮ್ಮನ್ನು ಕರೆದುಕೊಂಡು ಬಂದಿದ್ದ ದೋಣಿಯವರು ಮತ್ತೆ ನಮ್ಮನ್ನು ನದಿ ತೀರಕ್ಕೆ ತಲುಪಿಸಿದರು.

ಪ್ರಕೃತಿಯ ಒಡನಾಟವೇ ದೇವರ ಸಾಂಗತ್ಯವೆಂದು ನಂಬಿದವಳು ನಾನು. ಹೀಗೆ ತುಂಬಿ ಹರಿವ ಗಂಗೆಯಲ್ಲಿ ಮೀಯುವುದು ಒಂದು ಅಮೃತ ಗಳಿಗೆಯೇ ಸರಿ.

ಪುರಾಣದ ಪ್ರಕಾರ, ಸಮುದ್ರಮಂಥನದ ಸಮಯದಲ್ಲಿ ಉದ್ಭವವಾದ ಅಮೃತ ಕಳಶಕ್ಕೆ ದೇವತೆಗಳು ರಾಕ್ಷಸರು ಯುದ್ಧ ಮಾಡುತ್ತಿದ್ದಾಗ, ವಿಷ್ಣುವಿನ ಆಜ್ಞೆಯಂತೆ ಅಮೃತ ಕೊಂಡೊಯ್ಯುತ್ತಿದ್ದ ಗರುಡ ಅಮೃತಕಲಶವನ್ನು ಅಲುಗಿಸಿದನಂತೆ. ಆಗ ಕಲಶದಿಂದ ಒಂದೆರಡು ಹನಿ ಎರಡು ಮೂರು ಕಡೆ ಬಿದ್ದವಂತೆ. ಹಾಗೆ ಅಮೃತಬಿಂದುಗಳು ಬಿದ್ದ ಸ್ಥಳಗಳೇ ಪ್ರಯಾಗ, ಹರಿದ್ವಾರ, ಉಜ್ಜಯಿನಿ ಮತ್ತು ನಾಸಿಕ. ಹಲವು ಸತ್ ಮಿಥ್‌ಗಳ ನಡುವೆ ನಮ್ಮ ಪ್ರಯಾಗ ಯಾತ್ರೆ ಮಾರನೇ ದಿನಕ್ಕೂ ಮುಂದುವರೆಯಿತು.

ಸಂಗಮ ಸ್ನಾನದ ನಂತರ ನಾವು ಬಡೇ ಹನುಮಾನ್ ಮಂದಿರಕ್ಕೆ ಭೇಟಿ ಕೊಟ್ಟೆವು. ಇಪ್ಪತ್ನಾಲ್ಕು ಗಂಟೆ ನಿಂತರೂ ದರ್ಶನ ಸಾಧ್ಯವಿಲ್ಲ ಎನ್ನುವಷ್ಟು ಸರತಿ ಸಾಲುಗಳು. ಪೊಲೀಸರ ಸಹಾಯದಿಂದ ದರ್ಶನ ಸಾಧ್ಯವಾಯಿತು. ಅದರ ಮರುದಿನ ಸೂರ್ಯೋದಯದ ಸಮಯಕ್ಕೆ ನದಿ ತೀರಕ್ಕೆ ಹೋದೆವು. ನದಿ ಮರಳಿನ ಮೇಲೆಯೇ ಹಲವರು ಮಲಗಿದ್ದರು. ವಿಪರೀತ ಜನಜಂಗುಳಿ. ಅಲ್ಲಲ್ಲಿ ಬೆಂಕಿ ಉರಿಸಿ ಚಳಿ ಕಾಯಿಸುತ್ತಿದ್ದವರು ಹಲವರು. ದಾಸೋಹವೂ ನಡೆಯುತ್ತಿತ್ತು. ಕೆಲವೊಂದು ಟೆಂಟ್‌ಗಳಲ್ಲಿ ಬಾಬಾಗಳ ಪೂಜೆಗಳು ನಡೆಯುತ್ತಿದ್ದವು. ನಾಗಸಾಧುಗಳ ಜೊತೆ ಭಕ್ತರ ಮೆರವಣಿಗೆ. ಸಾಧು ಸಂತರು, ಬಾಬಾಗಳು, ನಾಗಸಾಧುಗಳು, ಸಾಧಕರು – ಎಲ್ಲರೂ ಅವರಿಗೆಂದೇ ನಿರ್ಮಿತವಾದ ಅಖಾಡಗಳಲ್ಲಿ ಇದ್ದರು.

ನದಿಗುಂಟ ರಾತ್ರಿಯಿಡೀ ಉರಿಯುವ ದೀಪಗಳ ವ್ಯವಸ್ಥೆಯೂ ಇತ್ತು. ನಾವು ಸಾಧುಗಳ ಮೆರವಣಿಗೆಯನ್ನು ನೋಡಲು ಹೋದೆವು. ನೂರಾರು ಟ್ರ್ಯಾಕ್ಟರುಗಳಲ್ಲಿ, ತೆರೆದ ಜೀಪಿನಲ್ಲಿ ಸಾಧುಗಳೊಂದಿಗೆ ಸನ್ಯಾಸಿನಿಯರು ನೀಟಾಗಿ ಅಲಂಕರಿಸಿಕೊಂಡು ಸಾಗಿದ್ದರು. ಅವರ ಹಿಂದೆ ಸಾವಿರಾರು ಭಕ್ತರು 'ಹರ ಹರ ಮಹಾದೇವ' ಎಂಬ ಉದ್ಘೋಷದೊಂದಿಗೆ ಸಾಗುತ್ತಿದ್ದರು. ಸಾಧುಗಳು ಸಾಗಿದ ಹಾದಿಯ ಮಣ್ಣನ್ನು ಸಹ ಭಕ್ತರು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು.

ಕುಂಭಮೇಳ ಎನ್ನುವುದು ಈ ದೇಶದ ವೈವಿಧ್ಯವನ್ನು ಅನಾವರಣಗೊಳಿಸುವಂತಹದ್ದು. ಜನರ ಭಾವಕೋಶದ ಭಾಗವಾಗಿರುವ ಭಕ್ತಿಯ ಹಲವು ರೂಪಗಳನ್ನು ಕಾಣಿಸುವಂತಹದ್ದು. ಅದೆಲ್ಲವನ್ನೂ ಕಂಡೇ ಅರಿಯಬೇಕು, ಅನುಭವಿಸಬೇಕು.

ಪ್ರತಿಕ್ರಿಯಿಸಿ: **feedback@sudha.co.in**

